<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ</u>

<u>ಎಸ್.ಸಿ.ನಂಬರ್: **80/2022**</u>

ಪಿರ್ಯಾದುದಾರರು: **ಬಿಂಡಿಗನವಿಲೆ ಪೊಲೀಸ್ ಠಾಣೆ**

**-ವಿರುದ್ಧ-**

ಆರೋಪಿ-**2** ಗಿರಿಜಾ

ಗಂಡನ ಹೆಸರು ಅಶೋಕ್ ಕುಮಾರ್

ವಯಸ್ಸು ವರುಷ

ಉದ್ಯೋಗ

ವಾಸ ಸ್ಥಳ ಸಿ. ಬಂಗಲಿ ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ದಾಖಲಿಸಿಕೊಂಡ ಆರೋಪಿಯ ಹೇಳಿಕೆ</u>

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನದ ಪರವಾಗಿ ವಿಚಾರಣೆಗೊಳಪಟ್ಟ ಪ್ರಾ.ಸಾ-1 ರಿಂದ ಪ್ರಾ.ಸಾ-9 ರವರ ಸಾಕ್ಷ್ಯಗಳನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ :

ಪ್ರಶ್ನೆ 2. ಪ್ರಾ.ಸಾ-1/ಹೇಮಲತಾ ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಘಟನೆ ನೆಡಯುವ 20 ದಿನಗಳ ಮೊದಲು ತಾವು ಮನೆ ಕಟ್ಟುತ್ತಿದ್ದುದರಿಂದ ತನ್ನ ಚಿಕ್ಕಮ್ಮನಾದ ಚಾಸಾ-2 ತನ್ನನ್ನು ಸಿ.ಬಂಗಲಿ ಗ್ರಾಮದಲ್ಲಿರುವ ತಮ್ಮ ಮನೆಗೆ ಕರೆಸಿಕೊಂಡಿದ್ದರು, ತಾನು ನಮ್ಮ ಚಿಕ್ಕಮ್ಮನ ಮನೆಯಲ್ಲಿ ಅಡುಗೆ-ತಿಂಡಿ ಮಾಡಿಕೊಂಡು ಇದ್ದೆನು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 3. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ದಿ: 30.05.2019 ರಂದು ತಾನು ನನ್ನ ಚಿಕ್ಕಮ್ಮನ ಮನೆಯಲ್ಲಿ ಇದ್ದಾಗ ನಮ್ಮ ಚಿಕ್ಕಮ್ಮ ತೋಟದ ಬಳಿ ಹೋಗಿದ್ದರು ಸಂಜೆ ಸುಮಾರು 5.30 ರ ಸಮಯದಲ್ಲಿ ಯಾರೋ ಕೂಗಾಡಿದ ಶಬ್ದ ಕೇಳಿಸಿತು ಎಂದೂ, ತನ್ನ ಚಿಕ್ಕಮ್ಮನು ಇನ್ನೂ ತೋಟದಿಂದ ಬಂದಿರಲಿಲ್ಲವಾದ್ದರಿಂದ ತಾನು ಮನೆಯಿಂದ ಸ್ವಲ್ಪ

ದೂರ ಹೋಗಿ ನೋಡಿದಾಗ ಅಲ್ಲಿ 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ಮಗಳು ಸುಜನ ಇದ್ದರು ಮತ್ತು ಸದರಿ ಆರೋಪಿಗಳು ನನ್ನ ಚಿಕ್ಕಮ್ಮನಾದ ಚಾಸಾ-2 ರವರಿಗೆ ಹೊಡೆಯುತ್ತಿದ್ದರು ಮತ್ತು 1 ನೇ ಆರೋಪಿ ಮಚ್ಚಿನಿಂದ ನನ್ನ ಚಿಕ್ಕಮ್ಮನಿಗೆ ಹೊಡೆಯುತ್ತಿದ್ದರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 4. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿ ನಿನ್ನನ್ನು ಈ ದಿನ ಬಿಡುವುದಿಲ್ಲ ಎಂದು ಮಚ್ಚಿನಿಂದ ಹೊಡೆಯಲು ಹೋದಾಗ ನನ್ನ ಚಿಕ್ಕಮ್ಮ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಾಗ ಸದರಿ ಏಟು ಅವರ ಬಲಗೈ ಹಾಗೂ ಪಕ್ಕೆಗೆ ಬಿದ್ದಿತು ಎಂದೂ, 1 ನೇ ಆರೋಪಿ ನನ್ನ ಚಿಕ್ಕಮ್ಮನಿಗೆ ಸೂಳೆ ಮುಂಡೆ, ನಾಯಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು, 1 ಮತ್ತು 2 ನೇ ಆರೋಪಿಗಳು ಹಾಗೂ ಅವರ ಮಗಳು ಸುಜನ ತಮ್ಮ ಕೈಗಳಿಂದ ನನ್ನ ಚಿಕ್ಕಮ್ಮನ ಮುಖಕ್ಕೆ ಹೊಡೆದರು ಹಾಗೂ ತನ್ನ ಚಿಕ್ಕಮ್ಮನ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 5. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ತಾನು ನನ್ನ ಚಿಕ್ಕಮ್ಮನನ್ನು ಬಿಡಿಸಲು ಹೋದಾಗ ಸದರಿ ಆರೋಪಿಗಳು ನಿನ್ನನ್ನು ಬಿಡುವುದಿಲ್ಲ ಎಂದು ತನಗೆ ಜೀವ ಬೆದರಿಕೆ ಹಾಕಿದರು ಎಂದೂ, ಚಾಸಾ-3 ಮತ್ತು 4 ರಂಗನಾಥ ಹಾಗೂ ಶಂಕರೇಗೌಡ ಬಂದು ಮಚ್ಚನ್ನು ಕಿತ್ತುಕೊಂಡು ಗಲಾಟೆ ಬಿಡಿಸಿದರು ಮತ್ತು ಆಗ ಆರೋಪಿ ಅಶೋಕ ಕುಮಾರನು ನನ್ನ ಚಿಕ್ಕಮ್ಮನನ್ನು ಕುರಿತು ನಿನ್ನನ್ನು ಇವತ್ತು ಬಿಡುತ್ತಿರಲಿಲ್ಲ ಇವರು ಬಂದಿದ್ದರಿಂದ ಬಿಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 6. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ನನ್ನ ಚಿಕ್ಕಮ್ಮನ ಕೈ ಕಾಲು ಹಾಗೂ ದೇಹದ ಇತರೆ ಭಾಗಗಳಿಂದ ರಕ್ತ ಬರುತ್ತಿತ್ತು, ರಂಗನಾಥ ಮತ್ತು ಶಂಕರೇಗೌಡ ಫೋನ್ ಮಾಡಿ ಆಂಬುಲೆನ್ಸ್ ಕರೆಸಿ ತನ್ನ ಚಿಕ್ಕಮ್ಮನನ್ನು ಆದಿಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು ಎಂದೂ, ನಂತರ ತನ್ನ ಚಿಕ್ಕಮ್ಮನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಯಿತು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 7. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಗಳು ಹಾಗೂ ನನ್ನ ಚಿಕ್ಕಮ್ಮ ನಡುವೆ ಘಟನೆಗೂ 9 ವರುಷಗಳ ಹಿಂದಿನಿಂದ ಜಮೀನಿನ ವಿಚಾರದಲ್ಲಿ ದ್ವೇಷವಿದ್ದುದರಿಂದ ಆರೋಪಿಗಳು ಈ ರೀತಿ ತನ್ನ ಚಿಕ್ಕಮ್ಮನಿಗೆ ಹೊಡೆದಿರುತ್ತಾರೆ, ಘಟನೆಯ ದಿನ ಹಾಗೂ ಮರುದಿನ ನನ್ನ ಚಿಕ್ಕಮ್ಮನನ್ನು ಆಸ್ಪತ್ರೆಗೆ ಸೇರಿಸಲು ಓಡಾಡುತ್ತಿದ್ದುದರಿಂದ ಘಟನೆಯ ದಿನವೇ ಪೊಲೀಸರಿಗೆ ದೂರು ಕೊಡಲು ಆಗಲಿಲ್ಲ ಎಂದೂ, ಘಟನೆಯಾದ 2 ದಿನಗಳ ನಂತರ ತಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿಗಳ ವಿರುದ್ಧ ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 8. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ತಾನು ದೂರು ಕೊಟ್ಟ ದಿನವೇ ಪೋಲಿಸರು ತಾನು ತೋರಿಸಿದ ಘಟನಾಸ್ಥಳಕ್ಕೆ ಬಂದು ಮಹಜರು ಮಾಡಿ ಘಟನಾಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮಚ್ಚನ್ನು ತಾನು ಪೊಲೀಸರಿಗೆ ಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ ಎಂದೂ, ರಕ್ತವಾಗಿದ್ದ ನನ್ನ ಚಿಕ್ಕಮ್ಮನ ಸೀರೆ ಮತ್ತು ರವಿಕೆಯನ್ನು ತಾನು ಕೊಟ್ಟಿದ್ದನ್ನು ಪೋಲಿಸರು ತೆಗೆದುಕೊಂಡಿರುತ್ತಾರೆ ಎಂದೂ, ಸದರಿ ಮಹಜರನ್ನು ಪೊಲೀಸರು ಮಧ್ಯಾಹ್ನ

3.00 ರಿಂದ ಸಂಜೆ ಸುಮಾರು 5.00 ಗಂಟೆವರೆಗೂ ಮಾಡಿರುತ್ತಾರೆ ಹಾಗೂ ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 9. ಪ್ರಾ.ಸಾ-2/ಡಾ.ಪ್ರಸಾದ್ ರವರು ತಮ್ಮ ಸಾಕ್ಷ್ಯದಲ್ಲಿ 30.04.2019 ರಂದು ಸಂಜೆ 07.00 ಗಂಟೆಗೆ ತಾನು ಸುಮಾರು 40 ವರ್ಷ ವಯಸ್ಸಿನ ಜಯಲಕ್ಷ್ಮಮ್ಮ ರವರನ್ನು ಪರೀಕ್ಷಿಸಿದೆ, ಅದೇ ದಿನ ಸಂಜೆ 5.30 ರ ಸುಮಾರಿಗೆ ಸಿ. ಬಂಗಲಿ ಗ್ರಾಮದಲ್ಲಿ ಅಶೋಕ್ ಕುಮಾರ್ ಎಂಬುವರು ಮಚ್ಚಿನಿಂದ ಹಲ್ಲೆ ನಡೆಸಿದ್ದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 10. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಪರೀಕ್ಷೆಯಲ್ಲಿ ಜಯಲಕ್ಷ್ಮಮ್ಮ ರವರ ಮೇಲೆ ಈ ಕೆಳಗಿನ ಗಾಯಗಳು ಕಂಡುಬಂದಿವೆ 1.ಬಲಗೈ ತೋರುಬೆರಳಿನ ಮೇಲೆ ಸೀಳಿರುವ ಗಾಯ, 2.ಎಡಗೈಯ ಮೇಲೆ ಸೀಳಿರುವ ಗಾಯ, ಹೆಬ್ಬೆರಳು ಮತ್ತು ತೋರುಬೆರಳಿನ ನಡುವಿನ ಜಾಲವನ್ನು 5*2*1 ಸೆಂ.ಮೀ ಅಳತೆ ಮಾಡಲಾಗಿದೆ, 3.ಬಲಗಾಲಿನ ಕೆಳಗಿನ ಮೊಣಕಾಲಿನ ಮೇಲೆ 1/3 ನೇ (ಬಲ) ಮೇಲೆ 2*1 ಸೆಂ.ಮೀ ಅಳತೆಯ ಗಾಯ, 4.ಮೊಣಕಾಲಿನ ಮೇಲೆ ಒಂದು ಪಂಕ್ಚರ್ಡ್ ಗಾಯ, ಟಿಬಿಯಾ, ಕೆಳಗಿನ 1/3 ನೇ (ಬಲ) 0.5 ಸೆಂ.ಮೀ ವ್ಯಾಸವನ್ನು ಹೊಂದಿದೆ, 5.ಬಲಗಾಲಿನ ಮೇಲೆ (ಪಾರ್ಶ್ವದ ಅಂಶ) 2.5*1 ಸೆಂ.ಮೀ ಅಳತೆಯ ಸೀಳಿರುವ ಗಾಯ, ರಕ್ತಸ್ರಾವವಿದೆ, 6.ಎಡಗಾಲಿನ ಮೇಲೆ (ಪಾರ್ಶ್ವದ ಅಂಶ) 6*2 ಸೆಂ.ಮೀ ಅಳತೆಯ ಸೀಳಿರುವ ಗಾಯ, ರಕ್ತಸ್ರಾವವಿದೆ, 7.ಎಡಗೈಯ ಮೇಲೆ (ಪಾರ್ಶ್ವದ ಅಂಶ) ಒಂದು ದೊಡ್ಡ ಸೀಳಿರುವ ಗಾಯ, ರಕ್ತಸ್ರಾವವಿದೆ, 8.ಬಲಗೈಯ ಮೇಲಿನ ತೋಳಿನ ಮೇಲೆ (ಹಿಂಭಾಗದ ಅಂಶ) 6*1 ಸೆಂ.ಮೀ ಅಳತೆಯ ಸೀಳಿರುವ ಗಾಯ, ರಕ್ತಸ್ರಾವವಿದೆ, 9.ಎಡ ಎದೆಯ ಹೊರಭಾಗದ ಮೇಲೆ 3*2 ಸೆಂ.ಮೀ ಅಳತೆಯ ಸೀಳಿರುವ

ಗಾಯ, 10. ಎಡಗೈಯ ಮೇಲಿನ ಉಂಗುರದ ಬೆರಳಿನ 4 ನೇ ವೆಬ್ ಜಾಗದಲ್ಲಿ 7*2 ಸೆಂ.ಮೀ ಅಳತೆಯ ಸೀಳಿರುವ ಗಾಯವನ್ನು ತಾನು ಗಮನಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 11. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ಎಕ್ಸ್-ರೇ ವರದಿಯ ಪ್ರಕಾರ ಎಡ ಎರಡನೇ ಮೆಟಾಕಾರ್ಪಲ್ ಮೂಳೆಯ ಮುರಿತ, ಎಡ 4 ನೇ ಪ್ರಾಕ್ಸಿಮಲ್ ಫ್ಯಾಲ್ಯಾಂಕ್ಸ್‌ನ ಮುರಿತ ಮತ್ತು ಬಲ ಟಿಬಿಯಾ ಶಾಫ್ಟ್ ಮುರಿತ ಮತ್ತು ಬಹು ಕತ್ತರಿಸಿದ ಸೀಳಿದ ಗಾಯಗಳು ಕಂಡುಬಂದಿವೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 12. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಲಾದ ಗಾಯ ಸಂಖ್ಯೆ 2, 4 ಮತ್ತು 10 ಗಂಭೀರವಾಗಿದ್ದವು ಮತ್ತು ಇತರೆ ಗಾಯಗಳು ಸರಳ ಸ್ವರೂಪದ್ದಾಗಿದ್ದವು, ಗಾಯದ ಪ್ರಮಾಣಪತ್ರದಲ್ಲಿ ಮೇಲ್ನೋಟಕ್ಕೆ ಗಾಯ ಸಂಖ್ಯೆ 1 ಅನ್ನು ಗಂಭೀರ ಸ್ವರೂಪದ್ದಾಗಿ ಉಲ್ಲೇಖಿಸಲಾಗಿದೆ, ಎಕ್ಸ್-ರೇ ಬಲ ತೋರುಬೆರಳಿನ ಯಾವುದೇ ಮುರಿತವನ್ನು ತೋರಿಸಿಲ್ಲ ಮತ್ತು ತಾನು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 13. ಪ್ರಾ.ಸಾ-3/ಜಯಲಕ್ಷ್ಮಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ಘಟನೆಗೂ 9 ವರುಷಗಳ ಹಿಂದಿನಿಂದಲೂ ಜಮೀನಿನ ವಿಚಾರದಲ್ಲಿ ತನ್ನ ಮತ್ತು 1 ನೇ ಆರೋಪಿಯ ನಡುವೆ ವಿವಾದವಿದ್ದಿತು, 2019 ರ 30 ನೇ ತಾರೀಖಿನಂದು (ತಿಂಗಳು ಮರೆತಿದ್ದೇನೆ) ಸಂಜೆ 5.30 ರ ಹೊತ್ತಿನಲ್ಲಿ ತಾನು ತಮ್ಮ ತೋಟಕ್ಕೆ ಮಂಜೇಗೌಡರ ತೋಟದ ಬಳಿ ಹೋಗುತ್ತಿದ್ದಾಗ 1 ನೇ ಆರೋಪಿ ತೋಟದ ಕಡೆಯಿಂದ ಏಣಿಯನ್ನು ತೆಗೆದುಕೊಂಡು ಬರುತ್ತಿದ್ದರು ಮತ್ತು ಸದರಿ ಏಣಿ ತನಗೆ ತಗುಲಿದಾಗ ತಾನು 1 ನೇ ಆರೋಪಿಗೆ ಏಕೆ ತನಗೆ

ಹೊಡೆಯುತ್ತೀಯಾ ಎಂದು ಕೇಳಿದೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 14. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಮತ್ತು 1 ನೇ ಆರೋಪಿಯ ನಡುವೆ ಮಾತಿಗೆ ಮಾತು ನಡೆದು 1 ನೇ ಆರೋಪಿ ಮಚ್ಚಿನಿಂದ ತನ್ನ ಬಲಗೈ ತೋರುಬೆರಳಿಗೆ ಹೊಡೆದರು ಹಾಗೂ ತನ್ನ ಎಡಮುಂಗೈಗೆ ಹಾಗೂ ಬೆರಳುಗಳಿಗೆ ಹೊಡೆದು 1 ನೇ ಆರೋಪಿ ತನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು ಎಂದೂ, ಅಷ್ಟು ಹೊತ್ತಿಗೆ ಅಲ್ಲಿಗೆ ಬಂದ 2 ನೇ ಆರೋಪಿ ಈ ಸೂಳೆ ಮುಂಡೆಯನ್ನು ಬಿಡಬೇಡ ಮುಖ ಮೂತಿ ನೋಡದೆ ಹೊಡಿ ಎಂದು 1 ನೇ ಆರೋಪಿಗೆ ಹೇಳಿದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 15. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ 2 ನೇ ಆರೋಪಿ ತನ್ನ ಕೈಯಿಂದ ತನ್ನ ಮುಖದ ಮೇಲೆ ಹೊಡೆದರು ಹಾಗೂ ತನ್ನ ಜುಟ್ಟು ಹಿಡಿದರು, 1 ನೇ ಆರೋಪಿ ಮಚ್ಚಿನಿಂದ ತನ್ನ ಬಲಗಾಲು ಹಾಗೂ ಎಡ ಹಿಮ್ಮಡಿಗೆ ಹೊಡೆದರು, 1 ನೇ ಆರೋಪಿ ತನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿ ಹಾಗೂ ತನ್ನ ಕೊಲೆ ಮಾಡಬೇಕೆಂದು ತನಗೆ ಈ ರೀತಿ ಮಚ್ಚಿನಿಂದ ಹೊಡೆದಿರುತ್ತಾರೆ ಎಂದೂ ಹಾಗೂ ಅಷ್ಟು ಹೊತ್ತಿಗೆ ಸ್ಥಳಕೆ ಬಂದ ತನ್ನ ಅಣ್ಣ ರಂಗನಾಥ್, ಶಂಕರೇಗೌಡ ಜಗಳ ಬಿಡಿಸಿದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 16. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ತಾನು ಕೂಗಿಕೊಂಡಾಗ ಫಿರ್ಯಾದಿ ಹೇಮಲತಾ ಸ್ಥಳಕ್ಕೆ ಬಂದು ತನ್ನನ್ನು ಆದಿಚುಂಚನಗಿರಿ ಆಸ್ಪತ್ರೆಗೆ ಆಂಬ್ಯುಲೆನ್ಸ್ ನಲ್ಲಿ ಕೆರದುಕೊಂಡು ಹೋಗಿ ನಂತರ ತನ್ನನ್ನು ಬೆಂಗಳೂರಿನ ಆಸ್ಪತ್ರೆಗೆ ಆಂಬ್ಯುಲೆನ್ಸ್ ನಲ್ಲಿ ಕೆರದುಕೊಂಡು ಹೋದರು ಎಂದೂ ಆರೋಪಿ ತನಗೆ ಹೊಡೆದಿದ್ದರಿಂದ ತನ್ನ ಕಾಲುಗಳ

ಮೂಳೆ ಮುರಿದಿದ್ದು, ತನಗೆ ಆಪರೇಶನ್ ಮಾಡಿರುತ್ತಾರೆ ಮತ್ತು ತನ್ನ ಪತಿ ಮೃತಪಟ್ಟಾಗಿನಿಂದ ಜಮೀನಿನ ಬಗ್ಗೆ ಇರುವ ದ್ವೇಷದಿಂದ ಆರೋಪಿ ಈ ರೀತಿ ತನಗೆ ಹೊಡೆದಿರುತ್ತಾರೆ ಎಂದು ಹೇಳಿದ್ದಾರೆ.

ಉತ್ತರ

17. ಪ್ರಾ.ಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಘಟನೆಯ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗೆ ರಕ್ತವಾಗಿತ್ತು ಮತ್ತು ಘಟನೆಯಾದ 5 ದಿನಗಳ ನಂತರ ಘಟನೆಯ ಎಲ್ಲಾ ವಿಚಾರಗಳನ್ನು ತಾನು ಪೊಲೀಸರ ಮುಂದೆ ಹೇಳಿರುತ್ತೇನೆ ಎಂದು ಹೇಳಿದ್ದಾರೆ.

ಪ್ರಶ್ನೆ 18. ಪ್ರಾ.ಸಾ-5/ರಂಗನಾಥ ರವರು ತಮ್ಮ ಸಾಕ್ಷ್ಯದಲ್ಲಿ 2019 ನೇ ಇಸವಿಯಲ್ಲಿ ತಾನು ದೇವರಮಾವಿನಕೆರೆ ಗ್ರಾಮದಿಂದ ಸಿ.ಬಂಗಲಿ ಗ್ರಾಮದಲ್ಲಿ ಚಾಸಾ-2 ರವರು ಒಂದು ಮನೆಯನ್ನು ಕಟ್ಟಿಸುತ್ತಾ ಇದ್ದರು ಮತ್ತು ಅದನ್ನು ನೋಡಿಕೊಂಡು ಹೋಗೋಣ ಎಂಬ ಉದ್ದೇಶದಿಂದ ಬಂದಿದ್ದೆನು ಮತ್ತು ಆ ಸಮಯದಲ್ಲಿ ಚಾಸಾ-4 ಶಂಕರ ರವರು ಸಹಾ ತನ್ನ ಜೊತೆ ಇದ್ದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 19. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ಆ ರೀತಿ ತಾವು ಹೋಗುತ್ತಾ ಇದ್ದಾಗ ಗಲಾಟೆ ಆಗುತ್ತಾ ಇರುವ ಶಬ್ದ ಕೇಳಿಸಿದಾಗ ತಾನು ಮತ್ತು ಚಾಸಾ-4 ರವರು ಆ ಗಲಾಟೆಯ ಶಬ್ದ ಬರುತ್ತಾ ಇದ್ದ ಸ್ಥಳಕ್ಕೆ ಹೋದಾಗ ಆರೋಪಿಗಳು ಮತ್ತು ಚಾಸಾ-2 ರವರು ಇದ್ದರು, 1 ಮತ್ತು 2 ನೇ ಆರೋಪಿಗಳು ಬಹಳ ಕೆಟ್ಟದಾದ ಭಾಷೆಯಿಂದ ಚಾಸಾ-2 ರವರಿಗೆ ಬೈಯುತ್ತಿದ್ದರು, ಚಾಸಾ-2 ರವರಿಗೆ ಮಚ್ಚಿನಿಂದ ಆರೋಪಿಗಳು ಕಡಿದಿದ್ದರು, ಆ ಮಚ್ಚಿನ ಏಟು ಚಾಸಾ-2

ರವರ ಕಾಲುಗಳ ಮೇಲೆ ಮತ್ತು ಕೈಗಳ ಮೇಲೆ ಮತ್ತು ಬೆನ್ನಿನ ಎಡಭಾಗದ ಮೇಲೆ ಬಿದ್ದಿತ್ತು ಮತ್ತು ಗಾಯಗಳು ಆಗಿದ್ದವು ಮತ್ತು ಆ ಮಚ್ಚಿನಿಂದ ಏಟುಗಳನ್ನು 1 ನೇ ಆರೋಪಿಯು ಚಾಸಾ-2 ರವರಿಗೆ ಹೊಡೆದಿದ್ದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 20. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ತಾನು ಮತ್ತು ಚಾಸಾ-4 ರವರು ಸೇರಿಕೊಂಡು 1 ನೇ ಆರೋಪಿಯ ಕೈಯಲ್ಲಿದ್ದ ಮಚ್ಚನ್ನು ಕಿತ್ತು ಕೆಳಕ್ಕೆ ಬಿಸಾಡಿದ ನಂತರ ಚಾಸಾ-2 ರವರನ್ನು ಆಕೆಯ ಮಕ್ಕಳು ಮೊದಲಿಗೆ ಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ನಂತರ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು ಮತ್ತು ಜಮೀನಿನ ವಿಷಯದಲ್ಲಿ ಆ ರೀತಿ ಗಲಾಟೆಯಾಗಿದೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 21. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ 1 ನೇ ಆರೋಪಿಯು ಚಾಸಾ-2 ರವರಿಗೆ ಸೂಳೆ ಮುಂಡೆ, ನಾಯಿ ಮುಂಡೆ ನಿನ್ನದು ಅತಿಯಾಯಿತು ನಿನ್ನನ್ನು ಇಲ್ಲಿಯೇ ಮುಗಿಸುತ್ತೇನೆ ಎಂದು ಬೈದು 1 ನೇ ಆರೋಪಿಯು ಮಚ್ಚಿನಿಂದ ಚಾಸಾ-2 ರವರ ಮೇಲೆ ಬೀಸಿದ್ದಾನೆ ಮತ್ತು ಅದರಿಂದ ತಪ್ಪಿಸಿಕೊಳ್ಳಲು ಚಾಸಾ-2 ರವರು ಕೈಯನ್ನು ಅಡ್ಡ ತಂದಾಗ ಎರಡೂ ಕೈಗಳಿಗೆ ಮಚ್ಚಿನ ಏಟು ತಗುಲಿ ರಕ್ತಗಾಯವಾಗಿದೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 22. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ 2 ನೇ ಆರೋಪಿ ಗಿರಿಜಾ ರವರು ಚಾಸಾ-2 ರವರನ್ನು ಉದ್ದೇಶಿಸಿ ಈ ಲೋಫರ್ ಮುಂಡೆಯನ್ನು ಜೀವ ಸಹಿತ ಬಿಡಬಾರದು

ಎಂದು ಬೈದಿದ್ದಾರೆ ಮತ್ತು ಕೈಗಳಿಂದ ಚಾಸಾ-2 ರವರ ಮುಖ ಮತ್ತು ಕೈಗೆ ಹೊಡೆದು ನೋವುಂಟು ಮಾಡಿದ್ದಾರೆ ಮತ್ತು ಕಾಲಿನಿಂದ ಒದ್ದು ಜುಟ್ಟನ್ನು ಹಿಡಿದು ಎಳೆದಾಡಿ ಕೆಳಕ್ಕೆ ಬೀಳಿಸಿದ್ದಾಳೆ ಮತ್ತು ಗಲಾಟೆಯನ್ನು ಬಿಡಿಸಲು ಹೋದ ಚಾಸಾ-1 ರವರನ್ನು 2 ನೇ ಆರೋಪಿಯು ಕೈಯಿಂದ ತಳ್ಳಿ ಬೀಳಿಸಿದ್ದಾಳೆ ಮತ್ತು 1 ನೇ ಆರೋಪಿಯು ಮಚ್ಚಿನಿಂದ ಚಾಸಾ-1 ರವರ ಕಾಲುಗಳಿಗೆ ಹೊಡೆದು ರಕ್ತಗಾಯ ಉಂಟು ಮಾಡಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 23. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಗಳು ಚಾಸಾ-2 ರವರನ್ನು ಉದ್ದೇಶಿಸಿ ಈ ದಿನ ಬಚಾವಾಗಿದ್ದೀಯಾ ಇನ್ನು ಒಂದು ದಿನ ನಿಮ್ಮನ್ನು ಮುಗಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಹೋದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 24. ಪ್ರಾ.ಸಾ-6/ಹರೀಶ ರವರು ತಮ್ಮ ಸಾಕ್ಷ್ಯದಲ್ಲಿ ಇವತ್ತಿಗೆ ಸುಮಾರು 4 ವರುಷಗಳ ಹಿಂದೆ ತಾನು ತೋಟದಿಂದ ಮನೆಯ ಕಡೆಗೆ ನಡೆದುಕೊಂಡು ಬರುತ್ತಿದ್ದಾಗ ಪೊಲೀಸರು ಬೇರೆಯವರ ಮಾಲೀಕತ್ವದ ತೋಟದ ಹತ್ತಿರ ನಿಂತಿದ್ದರು, ಪೊಲೀಸರ ಜೊತೆಯಲ್ಲಿ ಜಯಲಕ್ಷ್ಮಮ್ಮ ರವರ ಅಕ್ಕನ ಮಗಳು ಹೇಮಾವತಿ ಇದ್ದರು, ಪೊಲೀಸರು ತಾವು ಮಹಜರು ತಯಾರಿಸಲು ಬಂದಿರುವುದಾಗಿ ಮತ್ತು ಮಹಜರಿನ ಮೇಲೆ ಸಹಿ ಮಾಡುವಂತೆ ಹೇಳಿದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 25. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ತಾವು ನಿಂತಿದ್ದ ಸ್ಥಳದಲ್ಲಿ ಫೋಟೋ ತೆಗೆದರು, ಸ್ವಲ್ಪ ಬಟ್ಟೆಗಳನ್ನು ತೆಗೆದುಕೊಂಡರು, ಪೊಲೀಸರು ಹೇಳಿದಂತೆ

ಒಂದು ದಾಖಲೆಯ ಮೇಲೆ ಸಹಿ ಮಾಡಿದ್ದೇನೆ ಮತ್ತು ಹೇಮಾವತಿ ರವರು ತಮ್ಮ ಕೈಯಲ್ಲಿದ್ದ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 26. ಪ್ರಾ.ಸಾ-7/ರೇವಣ್ಣ ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 02.05.2019 ರಂದು 13.00 ಗಂಟೆ ಸುಮಾರಿಗೆ ಠಾಣಾ ಚಾರ್ಜಿನಲ್ಲಿದ್ದಾಗ ಹೇಮಲತಾ ಎನ್ನುವವರು ಠಾಣೆಗೆ ಬಂದು ತನ್ನ ಕೈಗೆ ನಿಪಿ-1 ರಲ್ಲಿ ಗುರುತಿಸಿರುವ ಕೊಟ್ಟ ದೂರಿನ ಆಧಾರದ ಮೇಲೆ ಅಶೋಕ ಕುಮಾರ, ಗಿರಿಜಾ ಮತ್ತು ಸೃಜನಾ ರವರ ವಿರುದ್ಧ IPC ಕಲಂ 341, 504, 323, 354, 307, 506 ಸಹ ಕಲಂ 34 ರನ್ವಯ ದಂಡಿಸಲ್ಪಡುವ ಅಪರಾಧಗಳಿಗೆ ಠಾಣಾ ಮೊಕದ್ದಮೆ ನಂ. 26/2019 ನೇ ದನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮುಖ್ಯ ಪೇದೆ ನಂಬರು-11 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 27. ಪ್ರಾ.ಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 02.05.2019 ರಂದು ಮಧ್ಯಾಹ್ನ 3.00 ಗಂಟೆಗೆ ಘಟನೆ ನಡೆದಿದೆ ಎನ್ನುವ ಸ್ಥಳಕ್ಕೆ ಹೋಗಿ ಪಂಚರಾದ ಹರೀಶ ಮತ್ತು ಪವನ್ ರವರ ಸಮಕ್ಷಮ ಹೇಮಲತಾ ರವರು ತೋರಿಸಿದ ಸ್ಥಳವನ್ನು ಪರಿಶೀಲನೆ ಮಾಡಿ ಹೇಮಲತಾ ರವರು ತೋರಿಸಿದ ಒಂದು ಮಚ್ಚು, ಒಂದು ಸೀರೆ, ಒಂದು ರಕ್ತದ ಕಲೆಯಾಗಿರುವ ಹರಿದ ರವಿಕೆಯನ್ನು ಮಹಜರು ತಯಾರಿಸಿ ವಶಪಡಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 28. ಪ್ರಾ.ಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ತಾನು ಮಚ್ಚು, ಸೀರೆ ಮತ್ತು ರವಿಕೆಯನ್ನು ವಶಪಡಿಸಿಕೊಳ್ಳುವಾಗ ಪ್ರತ್ಯೇಕವಾಗಿ ಬಟ್ಟೆಯ ಚೀಲಗಳಲ್ಲಿ ತುಂಬಿ ಮೊಹರು ಮಾಡಿದ್ದೇನೆ, ಸ್ಥಳದಲ್ಲಿ ತಯಾರಿಸಿದ ಮಹಜರಿನ ಮೇಲೆ ತಾನು ಸಹಿ ಮಾಡಿದ್ದೇನೆ ಮತ್ತು ಪಂಚರಾದ ಹರೀಶ ಮತ್ತು ಪವನ್ ಹಾಗೂ ಹೇಮಾವತಿ ರವರ ಸಹಿ ಮಾಡಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 29. ಪ್ರಾ.ಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ಮೇಲೆ ಹೇಳಿದ ವಸ್ತುಗಳನ್ನು ವಶಪಡಿಸಿಕೊಂಡ ವಿಚಾರವನ್ನು ಠಾಣಾ ಪಿ ಎಫ್ 19/2019 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಕಳುಹಿಸಿ ದಿಃ 02.05.2019 ರಂದು ಫಿರ್ಯಾದಿ ಹೇಮಲತಾ ರವರ ಮರು ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 30. ಪ್ರಾ.ಸಾ-7 ರವರು ತಮ್ಮ ಸಾಕ್ಷ್ಯದಲ್ಲಿ ತಾನು ದಿಃ 03.09.2019 ರಂದು ಸಾಕ್ಷಿದಾರರಾದ ರಂಗನಾಥ, ಶಂಕರೇಗೌಡ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಎಂದುಗ, ಕೃತ್ಯ ನಡೆದಿದ್ದ ಸ್ಥಳದಲ್ಲಿ ಮಹಜರು ತಯಾರಿಸುವಾಗ ಮತ್ತು ವಸ್ತುಗಳನ್ನು ವಶಪಡಿಸಿಕೊಳ್ಳುವಾಗ ನಿಪಿ.13 ರಲ್ಲಿ ಗುರುತಿಸಿರುವ ಫೋಟೋಗಳನ್ನು ತೆಗೆಸಿದ್ದೇನೆ ಎಂದೂ ಮತ್ತು ಆನಂತರ ಈ ಪ್ರಕರಣದ ಕಡತವನ್ನು ಮುಂದುವರೆದ ತನಿಖೆಗಾಗಿ ಚಾಸಾ-11 ನೇ ಪಿ ಎಸ್ ಐ ರವರಿಗೆ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 31. ಪ್ರಾ.ಸಾ-8/ರಾಧ.ಎಸ್. ರವರು ತಮ್ಮ ಸಾಕ್ಷ್ಯದಲ್ಲಿ ದಿ:08.05.2019 ರಂದು ಕಚೇರಿಯ ಮೂಲಕ ತನಗೆ ಒಂದು ಮಚ್ಚು, ಒಂದು ಸೀರೆ, ಒಂದು ಬ್ಲೌಸ್ ವೈಜ್ಞಾನಿಕ ಪರೀಕ್ಷೆಗಾಗಿ ಬಂದ ವಸ್ತುಗಳನ್ನು ರಾಸಾಯನಿಕ ಮತ್ತು ಸೀರಾಲಜಿ ವಿಧಾನವನ್ನು ಬಳಸಿಕೊಂಡು ಪರಿಶೀಲಿಸಿದ್ದೇನೆ ಮತ್ತು ಮೇಲೆ ಉಲ್ಲೇಖಿಸಲಾದ ಲೇಖನಗಳಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುವುದು ಕಂಡುಬಂದಿದೆ ಮತ್ತು ತಾನು ಆ ಪರಿಣಾಮದ ಬಗ್ಗೆ ವರದಿಯನ್ನು ಸಿದ್ಧಪಡಿಸಿ ಪಿಎಸ್ಐ ಬಿಂಡಿಗನವಿಲೆ ಪಿ.ಎಸ್. ಅವರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 32. ಪ್ರಾ.ಸಾ-8 ರವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ಕಚೇರಿಯ ಮೂಲಕ ರಾಸಾಯನಿಕ ಪರೀಕ್ಷೆಯ ನಂತರ ತಾನು ಮಚ್ಚು, ಸೀರೆ ಮತ್ತು ಬ್ಲೌಸ್‌ಗಳನ್ನು ಪ್ಯಾಕ್ ಮಾಡಿ ಸೀಲ್ ಮಾಡಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಿಂತಿರುಗಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 33. ಪ್ರಾ.ಸಾ-9/ಬಸವರಾಜು ರವರು ತಮ್ಮ ಸಾಕ್ಷ್ಯದಲ್ಲಿ ತಾನು 03.05.2019 ರಂದು ಚಾಸಾ-10 ನೇ ರೇವಣ್ಣ ASI ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ದಿ:05.05.2019 ರಂದು ಚಾಸಾ-2 ನೇ ಜಯಲಕ್ಷ್ಮಮ್ಮ ರವರ ರಕ್ತದ ಗುಂಪಿನ ಕುರಿತು ವರದಿಯನ್ನು ಆದಿಚುಂಚನಗಿರಿ ಆಸ್ಪತ್ರೆಯ ವೈದ್ಯರಿಂದ ಪಡೆದುಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 34. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ತಾನು 07.05.2019 ರಂದು ಮಾಲುಪಟ್ಟಿ ನಂಬರು

19/19 ರಲ್ಲಿ ನಮೂದಾಗಿರುವ ರಕ್ತದ ಕಲೆ ಇರುವ ಮಚ್ಚನ್ನು, ರವಿಕೆ ಮತ್ತು ಸೀರೆಯನ್ನು ರಾಸಾಯನಿಕ ಪರೀಕ್ಷೆಗಾಗಿ ಮೈಸೂರು RFSL ಕಛೇರಿಗೆ ಕಳುಹಿಸಿ 23.07.2019 ರಂದು RFSL ಕಛೇರಿಯವರು ಕಳುಹಿಸಿದ ನಿಪಿ.15 ರಲ್ಲಿ ಗುರುತಿಸಿರುವ ವರದಿಯನ್ನು ಮಚ್ಚು, ಸೀರೆ ಮತ್ತು ರವಿಕೆಗಳ ಜೊತೆಯಲ್ಲಿ ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 35. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ತಾನು 29.05.2019 ರಂದು ಚಾಸಾ-2 ನೇ ಜಯಲಕ್ಷ್ಮಮ್ಮ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಎಂದೂ, ತಾನು 05.08.2019 ರಂದು ವೈದ್ಯರು ಕಳುಹಿಸಿರುವ ನಿಪಿ-3 ರಲ್ಲಿ ಗುರುತಿಸಿರುವ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದೇನೆ ಮತ್ತು ತಾನು 18.12.2019 ರಂದು ವೈದ್ಯರಿಗೆ RFSL ವರದಿ ಮತ್ತು ಮಚ್ಚನ್ನು ಕಳುಹಿಸಿ ಗಾಯದ ಸ್ವರೂಪದ ಕುರಿತು ವರದಿಯನ್ನು ನಿಪಿ.4 ರಲ್ಲಿ ಗುರುತಿಸಿರುವ ಪತ್ರ ಬರೆದು ಕೇಳಿರುತ್ತೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 36. ಪ್ರಾ.ಸಾ-9 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ವಿನಂತಿಯ ಪ್ರಕಾರ ವೈದ್ಯರು ಮಚ್ಚು ಮತ್ತು RFSL ವರದಿಯನ್ನು ಪರಿಶೀಲನೆ ಮಾಡಿ ಮಚ್ಚಿನಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣ ಪತ್ರದಲ್ಲಿ ಬರದಿರುವಂತಹ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನಿಪಿ.5 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಅಭಿಪ್ರಾಯ ಬರೆದು ಕಳುಹಿಸಿದ್ದಾರೆ ಎಂದೂ ಮತ್ತು ದಿಃ 07.01.2020 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 37. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?
ಉತ್ತರ :

ಪ್ರಶ್ನೆ 38. ಹೇಳುವುದು ಇನ್ನೇನಾದರೂ ಇದೆಯೇ?
ಉತ್ತರ :

(ಮೇಲ್ಕಂಡ ಪ್ರಶ್ನೆಗಳನ್ನು ನಾನೇ ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ)

**(ಸುಬ್ರಮಣ್ಯ. ಜೆ.ಎನ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ದಿನಾಂಕ: **28.01.2026.**